ಸಾಕ್ಷಿಗೆ ದಿನಾಂಕ 14.07.2026 ರಂದು ಪ್ರಮಾಣ ವಚನ ಬೋಧಿಸಲಾಗಿದೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

2024 ರಲ್ಲಿ ನಾನು ಸಹಾಯಕ ಉಗ್ರಾಣ ಅಧಿಕಾರಿಯಾಗಿ ರಾಯಚೂರು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆನು. ನಾನು ಅರ್ಜಿದಾರರಿಗೆ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಯಾದಿಯನ್ನು ವಿಚಾರಣೆ ಪ್ರಾರಂಭಿಸುವ ಪೂರ್ವದಲ್ಲಿ ನೀಡಿದ್ದೆನೋ ಅಥವಾ ಇಲ್ಲವೋ ಎಂದು ನೆನಪಿರುವುದಿಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರು ಅಂತಹ ಯಾದಿಗಳನ್ನು ಕೇಳದೆ ಇರುವುದರಿಂದ ತಾನು ನೀಡಿಲ್ಲ ಎಂದು ಉತ್ತರಿಸಿದ್ದಾರೆ. ನಾನು ಸಾಕ್ಷಿದಾರರ ಯಾದಿ ಮತ್ತು ದಾಖಲೆಗಳ ವಿವರವನ್ನು ಅರ್ಜಿದಾರನಿಗೆ ನೀಡದೆ ಇರುವುದರಿಂದ ಆತ ರಕ್ಷಣಾತ್ಮಕ ಹೇಳಿಕೆಯನ್ನು ವಿವರವಾಗಿ ಸಲ್ಲಿಸಲು ಸಾಧ್ಯವಾಗಿಲ್ಲ ಅಂದರೆ ಸರಿಯಲ್ಲ.

2. ಅರ್ಜಿದಾರನ್ನು ದೋಷಾರೋಪಣ ಪತ್ರಕ್ಕೆ ಉತ್ತರವನ್ನು ಎದುರುದಾರರಿಗೆ ನೀಡಿದ್ದರು ಅಂದರೆ ಸರಿಯಲ್ಲ. ಅಂತಹ ಉತ್ತರ ನಿಶಾನೆ.ಎಮ್.8 ರಲ್ಲಿ ಇದೆ ಅಂದರೆ ಸಾಕ್ಷಿ ಸುಮ್ಮನಿದ್ದಾರೆ.

3. ನಿ.ಎಮ್.10 ಮತ್ತು 11 ಇವುಗಳನ್ನು ನೊಂದಾಯಿತ ಅಂಚೆ ಮೂಲಕ ಅರ್ಜಿದಾರನಿಗೆ ಕಳುಹಿಸಿಕೊಟ್ಟಿದ್ದು, ಅವು ಜಾರಿಯಾದ ಕುರಿತು ಯಾವುದೇ ದಾಖಲೆಗಳನ್ನು ಎದುರುದಾರರು ನನ್ನ ಮುಂದೆ ಹಾಜರು ಪಡಿಸಿರುವುದಿಲ್ಲ. ನಿ.ಎಮ್.10 ಮತ್ತು 11 ಇವುಗಳನ್ನು ಎದುರುದಾರರು ಸೃಷ್ಠಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ನಿ.ಎಮ್.21 ರಲ್ಲಿರುವ ಆಪಾದನೆಗಳ ಕುರಿತು ವಿಚಾರಣೆ ಮಾಡಿರುತ್ತೇನೆ. ನಾನು ನಿ.ಎಮ್.19 ರಲ್ಲಿರುವ ಆಪಾದನೆಗಳ ವಿಚಾರಣೆಯನ್ನು ಮಾಡಿರುವುದಿಲ್ಲ. ನಾನು ಅರ್ಜಿದಾರರಿಗೆ ನಿ.ಎಮ್.19 ಮತ್ತು 21 ರಲ್ಲಿರುವ ಆಪಾದನೆಗಳಿಗೆ ರಕ್ಷಣಾತ್ಮಕ ಹೇಳಿಕೆಗಳನ್ನು ನೀಡಲು ಸರಿಯಾದ

ಸಮಯವನ್ನು ನೀಡಿಲ್ಲ ಅಂದರೆ ಸರಿಯಲ್ಲ. ನಾನು ನಿ.ಎಮ್.19 ಮತ್ತು 21 ರಲ್ಲಿ ಉಲ್ಲೇಖಿಸಿರುವ ಯಾವುದೇ ದಾಖಲೆಗಳನ್ನು ಅರ್ಜಿದಾರನಿಗೆ ನೀಡಿಲ್ಲ ಏಕೆಂದರೆ ಆತ ಲಿಖಿತವಾಗಿ ಕೇಳಿಲ್ಲ.

4. ನಾನು ವಿಚಾರಣೆ ಕಾಲದಲ್ಲಿ ಪ್ರತಿ ಹಂತದಲ್ಲಿ ಅರ್ಜಿದಾರನಿಗೆ ಅವಕಾಶ ನೀಡಿಲ್ಲ ಅಂದರೆ ಸರಿಯಲ್ಲ. ನಾನು ಸರಿಯಾದ ವಿಚಾರಣೆಯನ್ನು ಮಾಡದೆ ನೈಸಗಿಕ ನಿಯಮಗಳನ್ನು ಪಾಲಿಸದೆ ಆದೇಶ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ತರಾತುರಿಯಲ್ಲಿ ವಿಚಾರಣೆಯನ್ನು ಮುಕ್ತಾಯಗೊಳಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

(ಬಿ.ಬಿ.ಜಕಾತಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.